# ಆರೋಗ್ಯಮಾತೆ ಜಾತ್ರೆ

ಆರೋಗ್ಯ ಮಾತೆ ಅಥವಾ ಮೇರಿ ಮಾತೆ ಜಾತ್ರೆ ಎಂದರೆ ಕ್ರೈಸ್ತರಿಗೆ ಅಚ್ಚುಮೆಚ್ಚು. ನಮ್ಮ ನಾಡಿನ ಹಲವು ಚರ್ಚುಗಳಲ್ಲಿ ಈ ಜಾತ್ರೆಗೆ ಸಾವಿರಾರು ಮಂದಿ ನೆರೆಯುತ್ತಾರೆ.

ಒಂಬತ್ತು ದಿನ ಈ ಜಾತ್ರೆಯ ಕಾರ್ಯಕ್ರಮಗಳು ಚರ್ಚ್‌ಗಳ ಆವರಣದಲ್ಲಿಯೇ ನಡೆಯುತ್ತವೆ. ದಿನವೂ ವಿಶೇಷ ಪೂಜೆ, ಬಲಿಪೂಜೆಗಳು ನಡೆಯುತ್ತವೆ. ಪುಣ್ಯಸ್ನಾನ, ದೀಢ್ ನಮಸ್ಕಾರ, ಮೊಣಕಾಲ ಮೇಲೆ ನಡೆದು ಬರುವ ಮೂಲಕವೂ ಹರಕೆ ತೀರುವ ಪದ್ಧತಿಗಳಿವೆ. ಕೊನೆಯ ದಿನ ಆರೋಗ್ಯಮಾತೆಯ ವಿಗ್ರಹದ ಮೆರವಣಿಗೆ ಕಳೆಗಟ್ಟುತ್ತದೆ. ಎಲ್ಲ ಜಾತಿ, ಧರ್ಮಗಳ ಜನರೂ ಈ ಮೆರವಣಿಗೆಯನ್ನು ನೋಡಿ ಸಂಭ್ರಮಿಸುವುದು ವಿಶೇಷ.

ಪ್ರಮುಖವಾಗಿ ಕಲಬುರ್ಗಿ, ರಾಯಚೂರು, ಬೀದರ್, ಬೆಳಗಾವಿಯಲ್ಲಿ ಮೆಥೋಡಿಸ್ಟ್ ನಡೆಯುವ ಕ್ರೈಸ್ತ ವಾರ್ಷಿಕ ಜಾತ್ರೆಗಳಲ್ಲಿ ಸಾವಿರಾರು ಮಂದಿ ಪಾಲ್ಗೊಳ್ಳುತ್ತಾರೆ.

ಮೈಸೂರು ಜಿಲ್ಲೆಯ ಕೆ.ಆರ್.ನಗರ ತಾಲ್ಲೂಕಿನ ದೋರನಹಳ್ಳಿ ಎಂದರೆ ಕ್ರೈಸ್ತರ ಕಿವಿ ನಿಮಿರುತ್ತದೆ. ಕ್ರೈಸ್ತರಷ್ಟೇ ಇರುವ ಈ ಹಳ್ಳಿಯಲ್ಲಿ ಜೂನ್ ತಿಂಗಳಲ್ಲಿ ನಡೆಯುವ ಸಂತ ಆಂಥೋಣಿ ಜಾತ್ರೆಯು 'ದೋರನಹಳ್ಳಿ ಜಾತ್ರೆ' ಎಂದೇ ಪ್ರಸಿದ್ಧ. ಹತ್ತಾರು ಊರುಗಳಿಂದ ಒಂದು ವಾರ ಮುಂಚಿತವಾಗಿ ಜನ ಜಾತ್ರೆಗೆಂದು ನೆರೆಯುತ್ತಾರೆ. ಇದು ಕನ್ನಡ ಕ್ರೈಸ್ತರ ಜಾತ್ರೆಯೂ ಹೌದು.



ಚಿತ್ರ: ಎಸ್.ಕೆ. ದಿನೇಶ್

ಏಕಾಂತದ ಭಕ್ತಿ ಬೇರೆ. ಜಾತ್ರೆಯಲ್ಲಿ ಕಾಣುವ ಲೋಕಾಂತದ ಭಕ್ತಿ ಬೇರೆ. ನಮಗೆ ಅವೆರಡೂ ಬೇಕು. ಇದು ಭಾರತ.

ಯಾವುದೇ ಜಾತ್ರೆಯಲ್ಲಿ ಗುಡಿ ಮತ್ತು ತೇರಿಗೆ ಮೊದಲ ಸ್ಥಾನ. ಗುಡಿಯ ಅಂಗಳದಲ್ಲೇ ಬಹಳಷ್ಟು ಜಾತ್ರೆ ನೆರೆಯುವುದು. ಗುಡಿ ಬೆಟ್ಟದ ಮೇಲಿದ್ದರೆ ಅದು ಪಾದ ಸವೆಸುವ ಜಾತ್ರೆ.

ಜಾತ್ರೆಯದ್ದು ಸಾವಿರಾರು ಕಂಗಳು ತುಂಬುವ ತೇರಿನೊಳಗೆ ದೇವರನ್ನಿಟ್ಟು ಮೆರೆಸುವ ಭಕ್ತಿ. ಹಾಗೇ ಮೊರೆಯುವ ಭಕ್ತಿ. ಏಕಾಂತದ ಭಕ್ತಿ ಮೌನದ್ದು. ಆದರೆ ಲೋಕಾಂತದ ಭಕ್ತಿಗೆ ಮೌನ ಅಸಹನೀಯ. ಅದು ಸಮುದ್ರದಂತೆ ಮೊರೆಯುತ್ತದೆ. ಮೈಮರೆತ ಆವೇಶದಲ್ಲಿ ಕೂಗುತ್ತದೆ.

ಈ ಆವೇಶವು ವಿಶಿಷ್ಟ ಆಚರಣೆಗಳ ಮೂಲಕ, ಅವುಗಳಲ್ಲಿ ಪಾಲ್ಗೊಳ್ಳುವವರು ಮತ್ತು ನೋಡುವವರಲ್ಲಿ ರೋಮಾಂಚನ, ಕಂಪನವನ್ನು ಉಂಟುಮಾಡುತ್ತದೆ. ಆಚರಣೆ ಎಂದರೆ ಬೇರೇನಿಲ್ಲ. ತಮ್ಮ ಒಕ್ಕಲಿನ ದೇವರುಗಳಿಗೆ ಭಕ್ತರು ಸಲ್ಲಿಸುವ ವಿಶಿಷ್ಟ ಸೇವೆ.

ಬೇವಿನ ಉಡುಗೆ ತೊಡುವ ಸೇವೆ, ಬುತ್ತಿಪೂಜೆ, ಉರುಳು ಸೇವೆ, ಬಾಯಿಗೆ ಬೀಗ ಹಾಕಿಕೊಳ್ಳುವ, ಬೆನ್ನಿಗೆ ಚುಚ್ಚಿಕೊಂಡು ನೇತಾಡುವ ಸೇವೆ, ಕೊಂಡದ ಮೇಲೆ ನಡೆಯುವುದು. ಬಡಿಗೆಗಳನ್ನು ಹಿಡಿದು ಬಡಿದಾಡುವುದು.. ಇನ್ನೂ ಉಂಟು: ಉಯ್ಯಾಲೆ ಸೇವೆ, ಶಯನ ಸೇವೆ, ಓಕುಳಿಯಾಟ, ತೆಪ್ಪೋತ್ಸವ, ಪಲ್ಲಕ್ಕಿ ಉತ್ಸವ, ಮಡಿಲು ತುಂಬುವುದು, ತಾಳಿ ಕಟ್ಟುವುದು..

ಒಂದೊಂದರ ಒಳಗೂ ವಿಶಿಷ್ಟ ಅರ್ಥಸಾಧ್ಯತೆಗಳು.

ಬಳ್ಳಾರಿ ಗಡಿಭಾಗದ ಕರ್ನೂಲು ಜಿಲ್ಲೆಯ ಆಲೂರು ಮಂಡಲದ ನೆಣಕಿ ಗ್ರಾಮಕ್ಕೆ ಸೇರಿದ ಅರಣ್ಯ ಪ್ರದೇಶದ ಮಾಳ ಮಲ್ಲೇಶ್ವರಸ್ವಾಮಿ ದೇವರ ಗುಡ್ಡದಲ್ಲಿ ವಿಜಯದಶಮಿ ಪ್ರಯುಕ್ತ ಭಕ್ತರು ಬಡಿಗೆಗಳನ್ನು ಹಿಡಿದು ಬಡಿದಾಡುವ ಆಚರಣೆ ಉಂಟು. ಅಂಬಿಗ ಕುಲದ ನಿಯಮಧಾರಿಯು ಕುದಿವ ಅನ್ನದ ತಪ್ಪಲೆಯಲ್ಲಿ ಕೈ ಇಡುವ ಆಚರಣೆ ಕೊಪ್ಪಳದ ಹುಲಿಗೆಮ್ಮ ಜಾತ್ರೆಯಲ್ಲಿ ನಡೆಯುತ್ತದೆ.

ಕಲಬುರ್ಗಿಯ ಹಿರಿಗೆಪ್ಪ ಜಾತ್ರೆಯಲ್ಲಿ ದೀಕ್ಷೆ ಹಿಡಿದವರು ಮನೆ ಮುಂದೆ ನಾಯಿಯಂತೆ ಬೊಗಳುವ ಆಚರಣೆ, ಕೊಡಗಿನ ತಿತಿಮತಿಯಲ್ಲಿ ಅಶ್ಲೀಲ ಬೈಗುಳದ ಆಚರಣೆ, ಭಾಗಮಂಡಲದ ಅಯ್ಯಂಗೇರಿಯಲ್ಲಿ ಕೊಳಲುಪೂಜೆ, ಕೊಟ್ಟೂರಿನ ಉಜ್ಜಯಿನಿ ಮರುಳಸಿದ್ದೇಶ್ವರ ಜಾತ್ರೆಯಲ್ಲಿ ಗುಡಿಯ ಗೋಪುರಕ್ಕೆ ತೈಲಾಭಿಷೇಕವೂ ಉಂಟು. ಅದೊಂದು ಅಪಾಯಕಾರಿ ಭಕ್ತಿ. ಆದರೂ ಭಕ್ತರು ತಾ ಮುಂದು, ನಾ ಮುಂದು ಎಂದು ಜಾರುವ ಗೋಪುರವನ್ನು ಏರಿ ತೈಲಾಭಿಷೇಕ ಮಾಡಿ ಧನ್ಯತೆ ಅನುಭವಿಸುತ್ತಾರೆ.



ಸೀಗೆ ಹುಟ್ಟಿಮೆಯಲ್ಲಿ ನಡೆಯುವ ನರಗುಂದದ ಸವದತ್ತಿ ಯಲ್ಲಮ್ಮನ ಜಾತ್ರೆ ಉತ್ತರ ಕರ್ನಾಟಕದ ಬಹುಪ್ರಸಿದ್ಧ ಜಾತ್ರೆಗಳಲ್ಲೊಂದು

ಚಿತ್ರ: ದಿನೇಶ್ ಮಾನೀರ್